**ಶಿಕ್ಷಕರ ಮತ್ತು ಪೋಷಕರ ಅಂಕಣ**

## ವೈಯಕ್ತಿಕ ಆದರ್ಶದ ಪ್ರಭಾವ

### ನಮ್ಮ ಮಕ್ಕಳಲ್ಲಿ ಚಾರಿತ್ರ್ಯವನ್ನು ಹೇಗೆ ಬೆಳೆಸುವುದು?

೧. ಮಕ್ಕಳಿಗೆ ಅವರ ವ್ಯಕ್ತಿತ್ವದ ಆಧ್ಯಾತ್ಮಿಕ ಆಯಾಮದ ಅರಿವು ಮಾಡಿಕೊಡಬೇಕು. ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ಅನುಷ್ಠಾನದಿಂದ ಅದನ್ನು ಪ್ರಕಟಗೊಳಿಸಿಕೊಳ್ಳುವಂತೆ ಅವರನ್ನು ಪ್ರೇರೇಪಿಸಬೇಕು.

೨. ತಮ್ಮ ಮಾನಸಿಕ ಮತ್ತು ಶಾರೀರಿಕ ಶಕ್ತಿಗಳನ್ನು ಸಂರಕ್ಷಿಸಿಕೊಂಡು, ಅದನ್ನು ಉನ್ನತೀಕರಿಸುವುದರ ಅವಶ್ಯಕತೆಯನ್ನು ಮಕ್ಕಳಿಗೆ ಮನದಟ್ಟು ಮಾಡಿಕೊಡಬೇಕು. ಇದರಿಂದ ಅವರು ಶಕ್ತಿಶಾಲಿ ಚಾರಿತ್ರ್ಯ ಮತ್ತು ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುತ್ತಾರೆ. ಅದು ಅವರನ್ನು ಜೀವನದ ಸವಾಲುಗಳನ್ನು ಬುದ್ಧಿವಂತಿಕೆ ಮತ್ತು ಧೈರ್ಯದಿಂದ ಎದುರಿಸಲು ಸಹಾಯ ಮಾಡುತ್ತದೆ.

೩. ನಮ್ಮ ದೇಶದ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮಕ್ಕಳಿಗೆ ಪರಿಚಯಿಸಬೇಕು. ಆಗ ಅವರು, ಈ ಅಮೂಲ್ಯ ಸಂಪತ್ತನ್ನು ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ತಲುಪಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ.

೪. ನಮ್ಮ ಸಾಂಪ್ರದಾಯಿಕ ಮೌಲ್ಯಗಳೊಡನೆ, ನೂತನ ಸಾಂಸ್ಕೃತಿಕ ಮತ್ತು ತಾಂತ್ರಿಕ ಮೌಲ್ಯಗಳನ್ನು ಸಂಯೋಜಿಸಿಕೊಂಡು, ಸಮಗ್ರ ದೃಷ್ಟಿಯನ್ನು ಬೆಳೆಸಿಕೊಳ್ಳಲು ನಾವು ನಮ್ಮ ಮಕ್ಕಳಿಗೆ ಸಹಾಯ ಮಾಡಬೇಕು. ಇದರಿಂದಾಗಿ ಅವರು ಆಧುನಿಕ ಸಮಾಜವು ಒಡ್ಡುವ ಅಧಿಕಾರ ಮತ್ತು ಆಮಿಷಗಳನ್ನು ಯಶಸ್ವಿಯಾಗಿ ಎದುರಿಸಬಲ್ಲರು.

೫. ಮಕ್ಕಳಿಗೆ ಸಾಮಾಜಿಕ ನಡವಳಿಕೆ, ವರ್ತನೆಗಳ ಮಹತ್ವದ ಬಗ್ಗೆ ಬೋಧಿಸಬೇಕು. ಆಗ ಅವರು ತಮ್ಮ ಸಹಬಾಂಧವರೊಡನೆ, ಸಮನ್ವಯ ಮತ್ತು ಸಹಕಾರ ಭಾವನೆಯಿಂದ ಜೀವಿಸಬಲ್ಲರು.

೬. ಮಕ್ಕಳಲ್ಲಿ ಸಾಮಾಜಿಕ ಬಾಧ್ಯತೆಗಳು ಮತ್ತು ಜವಾಬ್ದಾರಿಗಳ ಬಗ್ಗೆ ಅರಿವು ಮೂಡಿಸಬೇಕು. ಅವರ ವೈಯಕ್ತಿಕ ಯಶಸ್ಸು ಸಮಾಜ ಮತ್ತು ರಾಷ್ಟ್ರಗಳ ಹಿತಕ್ಕೆ ಪೂರಕವಾಗಿರಬೇಕೆಂಬ ಪ್ರಜ್ಞೆ ಅವರಲ್ಲಿ ಮೂಡುವಂತೆ ಮಾಡಬೇಕು.

೭. ಹಣ, ಅಧಿಕಾರ, ಅಂತಸ್ತುಗಳನ್ನು ಪಡೆಯುವುದು ಮಾತ್ರವೇ ಜೀವನದ ಯಶಸ್ಸಿಗೆ ಕಾರಣವಾಗುವುದಿಲ್ಲ. ಅದಕ್ಕಾಗಿ, ಈ ಕೆಳಗಿನ ಅಂಶಗಳು ಬೇಕಾಗುತ್ತವೆ ಎಂಬ ವಿಷಯವನ್ನು ಮಕ್ಕಳ ಮನಸ್ಸಿನಲ್ಲಿ ಮೂಡಿಸಬೇಕು: (೧) ಅಂತರಂಗದ ಶಾಂತಿ ಮತ್ತು ಸಂತೋಷ, (೨) ಪರಸ್ಪರ ಆರೋಗ್ಯಕರ ವ್ಯಕ್ತಿಗತ ಸಂಬಂಧ, (೩) ಸಮಾಜದಿಂದ ನಾವೆಷ್ಟು ಪಡೆಯುತ್ತೇವೆಯೋ, ಅದಕ್ಕಿಂತ ಹೆಚ್ಚು ನಾವು ಸಮಾಜಕ್ಕೆ ಕೊಡುಗೆಯನ್ನು ಕೊಡುವ ಸಾಮರ್ಥ್ಯ, (೪) ಇತರರ ಬಾಳನ್ನು ಸಂತೋಷಮಯವನ್ನಾಗಿ ಮಾಡಲು ನಾವು ಎಷ್ಟು ಅವರಿಗೆ ಸಹಾಯ ಅಥವಾ ಸಾಂತ್ವನ ನೀಡಬಲ್ಲೆವು ಎಂಬುದರ ಗಣನೆ.

ಚಾರಿತ್ರ್ಯ ನಿರ್ಮಾಣದ ಪ್ರಕ್ರಿಯೆಯಲ್ಲಿ ಎರಡು ದಾರಿಗಳಿವೆ. ಒಂದು ಆಧ್ಯಾತ್ಮಿಕತೆಯೇ ಕೇಂದ್ರವಾಗುಳ್ಳ ಶಾಲಾ ಶಿಕ್ಷಣ. ಇನ್ನೊಂದು ನಮ್ಮ ಸ್ವಂತ ಜೀವನದ ಉದಾಹರಣೆಯ ಮೂಲಕ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬುವುದು.

### ಚಿರಂತನ ಸ್ಫೂರ್ತಿಯ ಸೆಲೆಗಳಾಗಿ ರಾಮಾಯಣ ಮಹಾಭಾರತಗಳು

ವಾಲ್ಮೀಕಿ ರಾಮಾಯಣ ಆರಂಭವಾಗುವುದು ಹೀಗೆ. ನಾರದರಿಗೆ ವಾಲ್ಮೀಕಿ ಮಹರ್ಷಿಗಳು ಜಗತ್ತಿನಲ್ಲಿಯೇ ಅತ್ಯಂತ ಉತ್ತಮ ವ್ಯಕ್ತಿ ಯಾರು ಎಂದು ಕೇಳುತ್ತಾರೆ. ಅವನಿಗಿರಬೇಕಾದ ಅನೇಕ ಗುಣಗಳನ್ನು ಹೇಳುತ್ತಾರೆ. ಅದಕ್ಕೆ ನಾರದರು ಹೇಳುತ್ತಾರೆ: "ಇಂತಹ ಗುಣಗಳು ಒಬ್ಬನೇ ವ್ಯಕ್ತಿಯಲ್ಲಿ ಕಾಣಸಿಗುವುದು ಕಷ್ಟ. ಆದರೆ ಅಂತಹವನು ಒಬ್ಬನಿದ್ದಾನೆ. ಅವನೇ ರಾಮ." ನಂತರ ರಾಮನ ಸಂಕ್ಷಿಪ್ತ ಚರಿತ್ರೆಯನ್ನು ನಾರದರು ಹೇಳುತ್ತಾರೆ. ಅದನ್ನು ಆಧಾರವಾಗಿ ಇಟ್ಟುಕೊಂಡು ವಾಲ್ಮೀಕಿ ಮುನಿಗಳು ರಾಮಾಯಣ – ಅಂದರೆ ರಾಮನ ಮಾರ್ಗ ಎಂಬ ಗ್ರಂಥವನ್ನು ರಚಿಸುತ್ತಾರೆ. ಇದರಲ್ಲಿ ವಾಲ್ಮೀಕಿ, ಜಗತ್ತಿನ ಎಲ್ಲರೂ ಆದರ್ಶವಾಗಿ ಪರಿಗಣಿಸಬಹುದಾದ ಉನ್ನತ ಗುಣಗಳನ್ನು ಹೊಂದಿರುವ ಆದರ್ಶಪುರುಷನನ್ನಾಗಿ ರಾಮನನ್ನು ಚಿತ್ರಿಸಿದ್ದಾರೆ. ಅವನ ಸಂಪರ್ಕಕ್ಕೆ ಬಂದ ಎಲ್ಲರನ್ನೂ ರಾಮನು ಮೇಲೆತ್ತುವ ಗುಣ ಹೊಂದಿದ್ದನು. ಇದರಲ್ಲೇ ರಾಮನ ವೈಶಿಷ್ಟ್ಯ ಇರುವುದು. ಇದರಿಂದಾಗಿಯೇ, ಅವನ ಚರಿತ್ರೆಯನ್ನು ಓದಿದ ಲಕ್ಷಗಟ್ಟಲೆ ಜನಕ್ಕೆ ಪವಿತ್ರವಾದ ಬಾಳನ್ನು ಬಾಳಲು ಸ್ಫೂರ್ತಿ ಮತ್ತು ಪ್ರೇರಣೆ ದೊರಕಿವೆ.

ಮಹಾಭಾರತದಲ್ಲೂ ಅನೇಕ ಪುರುಷಶ್ರೇಷ್ಠರ ವೃತ್ತಾಂತವನ್ನು ನಾವು ನೋಡುತ್ತೇವೆ. ಅವರಲ್ಲಿ ಪ್ರತಿಯೊಬ್ಬರೂ ಒಂದು ಉದಾತ್ತ ಗುಣವನ್ನು ಪ್ರತಿನಿಧಿಸುತ್ತಾರೆ. ಭೀಷ್ಮ ಪಿತಾಮಹನ ಪ್ರತಿಜ್ಞೆ, ಯುಧಿಷ್ಠಿರನ ಧಾರ್ಮಿಕ ನಡವಳಿಕೆ, ಅರ್ಜುನನ ಎಡೆಬಿಡದ ಪ್ರಯತ್ನಶೀಲತೆ, ಕರ್ಣನ ದಾನಗುಣ, ಭೀಮನ ದೇಹಬಲ, ಯುವಕ ಅಭಿಮನ್ಯುವಿನ ಸಾಹಸ – ಇವೆಲ್ಲ ಸ್ಫೂರ್ತಿಯ ಚಿರಂತನ ಆಕರಗಳು.

ಕೆಲವು ವರ್ಷಗಳ ಹಿಂದೆ ಈ ಎರಡೂ ಮಹಾಗಾಥೆಗಳು ದೂರದರ್ಶನದಲ್ಲಿ ಧಾರಾವಾಹಿಗಳಾಗಿ ಬಿತ್ತರಗೊಂಡಾಗ, ಜನ ಅದನ್ನು ಮಂತ್ರಮುಗ್ಧರಾಗಿ ವೀಕ್ಷಿಸಿದರು. ಇದು ಭಾರತದ ಜನಮಾನಸದ ಮೇಲೆ, ಯುಗಯುಗಗಳಿಂದಲೂ ರಾಮಾಯಣ ಮಹಾಭಾರತಗಳು ಬೀರುತ್ತಿರುವ ಮಹಾನ್ ಪ್ರಭಾವದ ದ್ಯೋತಕವಾಗಿದೆ.

### ನಿಮ್ಮ ಮಕ್ಕಳಿಗೆ ಸ್ಫೂರ್ತಿಯನ್ನು ಕೊಡುವವರು ಯಾರು?

ನಿಮ್ಮ ಮಕ್ಕಳ ಮನಸ್ಸನ್ನು ಮುದಗೊಳಿಸಿ, ಅವರ ಹೃದಯವನ್ನು ತಟ್ಟಿ, ಅವರನ್ನು ಬದುಕಿನ ಉನ್ನತ ಆಯಾಮಗಳತ್ತ ಕೊಂಡೊಯ್ಯುವ ಸ್ಫೂರ್ತಿದಾಯಕರು ಯಾರು? ನಿಮ್ಮ ಮಕ್ಕಳ ಜವಾಬ್ದಾರಿಯನ್ನು ವಹಿಸಿಕೊಂಡು, ಅವರಿಗೆ ಪ್ರೇರಕಶಕ್ತಿಯಾಗಿ ಆದರ್ಶ ಪುರುಷರಾಗಬಲ್ಲವರು ಒಬ್ಬರೇ. **ಅವರೆಂದರೆ, ಪೋಷಕರು ಮತ್ತು ಶಿಕ್ಷಕರಾದ ನೀವು, ನೀವು ಮಾತ್ರ** ತಿಳಿದೋ ತಿಳಿಯದೆಯೋ, ನಮ್ಮ ದೈನಂದಿನ ಚಿಂತನೆ, ನಡವಳಿಕೆ, ಹವ್ಯಾಸ, ಹಾವಭಾವ, ಮಾತುಕತೆ – ಇವುಗಳೆಲ್ಲದರಿಂದ ನಾವು ನಮ್ಮ ಮಕ್ಕಳ ಚಾರಿತ್ರ್ಯದ ಮೇಲೆ ಪರಿಣಾಮವನ್ನು ಬೀರುತ್ತಲೇ ಇರುತ್ತೇವೆ. ಮಗುವೊಂದರ ವ್ಯಕ್ತಿತ್ವವನ್ನು ಪ್ರಭಾವಶಾಲಿಯಾಗಿ ಮೂಡಿಸುವ ಪವಿತ್ರ ಕರ್ತವ್ಯ ನಮ್ಮ ಮೇಲಿದೆಯೆಂದು, ಅದೊಂದು ದೊಡ್ಡ ಅವಕಾಶವೆಂದು ನಾವು ಸದಾ ನೆನಪಿಡಬೇಕು. – ಅದನ್ನು ಕೆಲವು ಉದಾಹರಣೆಗಳ ಮೂಲಕ ನೋಡೋಣ.

(ಮುಂದಿನ ಪುಟದಲ್ಲಿದೆ)